ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Saturday, 29th September, 1973/Ashvayuja 7, 1895 S. E.

The House met in the Assembly Chamber, Vidhana Soudha, at Nine of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which oral Answers were given)

MALAPRBHA AND GHATAPRABHA DAM WORKS

183. Sri KAGODU THIMAPPA (Sagar) — Will the Minister of State for Major Irrigation be pleased to state:—

(a) the contractors to whom the main dam work of Malaprabha and Ghataprabha were entrusted ;

(b) the basis on which the estimates were prepared taking into account the places from which the quarries were required to be brought for the above works ;

(c) whether it is a fact that the Contractors of the above works have now been demanding the Government to pay extra lead charges ;

(d) if so, the action taken by the Government in this behalf ?

Sri H. N. NANJE GOWDA (Minister for State for Major Irrigation).—

(a), (b) and (c) The details are furnished in the Statement placed on the Table of of the House.*

---

*Copy placed in the Mysore Legislature Library *vide* No. 23/dated 29-9-1973.

(d) The matter is under consideration of the Government.

ಶ್ರೀ ಕಾಗೋಡು ತಿಮ್ಮಪ್ಪ.—ಗುತ್ತಿಗೆದಾರರಿಂದ ಇನ್ನೂ ಹೆಚ್ಚಿಗೆ ಲೀಡ್ ಚಾರ್ಜಸ್ ಕೊಡಬೇಕೆಂಬ ಬೇಡಿಕೆ ಸರ್ಕಾರಕ್ಕೆ ಬಂದಿದೆಯೆಂದು ಹೇಳಿದ್ದೀರಿ. ಯಾವ್ಯಾರಿಗೆ ಎಷ್ಟೆಷ್ಟು ಮೊಬಲಗನ್ನು ಕೊಡಬೇಕೆಂಬುದಾಗಿ ಸ್ಕೀಮ್ ಹಾಕಿದ್ದೀರಿ?

ಶ್ರೀ ಎಚ್. ಎನ್. ನಂಜೇಗೌಡ —ಎಷ್ಟು ಲೀಡ್ ಚಾರ್ಜಸ್ ಕೊಡಬೇಕೆಂಬ ಬಗ್ಗೆ ಇನ್ನೂ ಲೆಕ್ಕಾಚಾರವನ್ನು ಹಾಕಬೇಕು. ಅದರ ಬಗ್ಗೆ ಟೆಕ್ನಿಕಲ್ ಸಬ್ ಕಮಿಟಿ ಏನಿದೆಯೋ ಅದು ಅದನ್ನು ಪರಿಶೀಲನೆ ಮಾಡುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಲಪ್ರಭ ಡ್ಯಾಮಿನ ಬಗ್ಗೆ ಹೇಳುವದಾದರೆ ಅಲ್ಲಿನ ಫೇಸ್ಡ್ ಸ್ಟೋನ್ಸ್ ವಿಚಾರದಲ್ಲಿ ತಾವು ನಿಗದಿ ಮಾಡಿರತಕ್ಕ ಹಾಗೆ ೧೫ ಕಿಲೊ ಮೀಟರವರೆಗೆ ಹೆಚ್ಚುವರಿ ಕೇಳಿದ್ದಾರೆ. ಈಗ ತಾವು ಗೊತ್ತುಪಡಿಸಿರತಕ್ಕ ಕ್ವಾರಿ ಯಲ್ಲದೆ ಇನ್ನೂ ಹೆಚ್ಚಿನ ದೂರದ ಕ್ವಾರಿಯಿಂದ ತಂದಿದ್ದರೆ, ಯಾವ ಕ್ವಾರಿಯಿಂದ ಅದನ್ನು ತಂದಿದ್ದಾರೆ?

ಶ್ರೀ ಎಚ್. ಎನ್. ನಂಜೆಗೌಡ.—ಅದನ್ನು ೯೩ ಕಿಲೊಮೀಟರ ಇರತಕ್ಕ ಕ್ವಾರಿಯಿಂದ ತಂದಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ನಿಮ್ಮ ಅಂದಾಜಿನಲ್ಲಿ ನಮೂದಿಸಿರುವ ಹಾಗೆ ನೋಡಿದರೆ ಅದಕ್ಕಿಂತಲೂ ಹೆಚ್ಚಿಗೆ ಪೇಸ್ಡ್ ಸ್ಟೋನ್ಸನ್ನು ಹೆಚ್ಚುವರಿ ತಂದಿದ್ದಾರೆಂದು ಹೇಳಿದೆ. ಅದನ್ನು ಅವರು ಎಷ್ಟು ದೂರ ಅಂತರದಿಂದ ತಂದಿದ್ದಾರೆ ಆಕ್ವಾರಿ ಯಾವದು?

ಶ್ರೀ ಎಚ್. ಎನ್. ನಂಜೇಗೌಡ.—ಅದು ಕೊಣ್ಣೂರು ಕ್ವಾರಿ ೯೩ ಕಿಲೊ ಮೀಟರ ದೂರದಿಂದ ಅದನ್ನು ತರಲಾಗಿದೆಯೆಂದು ವರದಿ ಇರತಕ್ಕದ್ದು.

ಶ್ರೀ ಕಾಗೋಡು ತಿಮ್ಮಪ್ಪ.—ಸಭೆಯ ಮುಂದೆ ಇಟ್ಟಿರುವ ಪಟ್ಟಿಯ ಪ್ರಕಾರ ಅದರಲ್ಲಿರತಕ್ಕ ಐಟಂ ೧೩ ರಿಂದ ೧೭ರ ವರೆಗೆ ನೀವು ನಿಗದಿಪಡಿಸಿರತಕ್ಕ ಕ್ವಾರಿಯನ್ನು ಬಿಟ್ಟು ಹೆಚ್ಚಿಗೆ ತಂದಿರುವದನ್ನು ಲೆಕ್ಕ ನೋಡಿಕೊಂಡು ಕೇಳಿದ್ದಾರೆ. ಆದ್ದರಿಂದ ಈ ಆರು ಐಟಂಗಳಲ್ಲಿ ಅಂದಾಜಿನಲ್ಲಿ ಕೊಂಡಿರತಕ್ಕ ಕ್ವಾರಿ ಬಿಟ್ಟು ಯಾವ ಕ್ವಾರಿ ಯಿಂದ ಅದನ್ನು ತಂದಿದ್ದಾರೆ? ಇದರಿಂದ ಎಷ್ಟು ಮೈಲಿ ಅಂದಾಜು ಹೆಚ್ಚಾಗಿದೆ?

ಶ್ರೀ ಎಚ್. ಎನ್. ನಂಜೆಗೌಡ.—ಅದನ್ನು ಪರಿಶೀಲಿಸಬೇಕಾಗುತ್ತದೆ. ಘಟಪ್ರಭಾ ಡ್ಯಾಂ ವರ್ಕ್ಸಗೆ ಕೊಣ್ಣೂರು ಕ್ವಾರಿಯಿಂದ ಕಲ್ಲುಗಳನ್ನು ತಂದಿದ್ದಾರೆ. ಅದನ್ನು ಎರಳಕೆರೆಯ ಹತ್ತಿರ ಹಾಕಿದ್ದಾರೆ ಅದು ಈಗಾಗಲೇ ಕ್ಲೇಮ್ಸ್ ಕಮೀಟಿಯ ಮುಂದೆ ಹೋಗಿದೆ. ಆ ಕಮೀಟಿಯವರು ಅದನ್ನು ಪರಿಶೀಲನೆ ಮಾಡಿದ ಮೇಲೆ ಅದರ ಬಗ್ಗೆ ವಿವರಗಳು ಗೊತ್ತಾಗುತ್ತವೆ.

ಶ್ರೀ ಕಾಗೋಡು ತಿಮ್ಮಪ್ಪ.—ಅವರು ಈ ರೀತಿಯಾಗಿ ಕೆಲಸ ಮಾಡುವ

ಕಾಲದಲ್ಲಿ ನೀವು ಗೊತ್ತುಪಡಿಸಿರುವ ಕ್ವಾರಿಯಿಂದ ಕಲ್ಲುಗಳನ್ನು ತರುವದನ್ನು ಬಿಟ್ಟು ಬೇರೆ ಕ್ವಾರಿಯಿಂದ ಅದನ್ನು ತರುವದಕ್ಕೆ ಕಾರಣಗಳೇನಿದ್ದವು? ಅದರ ಬಗ್ಗೆ ಅವರು ಇಲಾಖೆಯವರ ಒಪ್ಪಿಗೆಯನ್ನು ತೆಗೆದುಕೊಂಡಿದ್ದಾರೆಯೇ?

ಶ್ರೀ ಎಚ್. ಎನ್. ನಂಜೇಗೌಡ.—ಒಪ್ಪಿಗೆ ಪ್ರಶ್ನೆ ಏನೂ ಇಲ್ಲ ಟೆಂಡರ ನೋಟಿಫಿಕೇಷನ್ನಿನಲ್ಲಿ ಎಲ್ಲಾ ಕಂಡಿಷನ್ಸ್ ಹಾಕಿರುತ್ತಾರೆ. ಈ ಮಧ್ಯೆ ಅಧಿಕಾರ ವರ್ಗದವರಿಗೆ ಈ ವಿಚಾರಗಳನ್ನು ಅವರೂ ಹೇಳಿದ್ದಾರೆ. ಸರ್ಕಾರಕ್ಕೆ ದೂರನ್ನೂ ಕೊಟ್ಟಿದ್ದಾರೆ ಲೆಕ್ಕಹಾಕಿದ ಪ್ರಕಾರ ಒಂದು ಕ್ವಾರಿಯಲ್ಲಿ ಸುಮಾರು ೨೯೦ ರಿಂದ ೬೦ ರಷ್ಟು ಸ್ಪೆಸಿಫೈಡ್ ಸ್ಟೋನ್ಸ್ ಸಿಗಬೇಕಾಗುತ್ತದೆ ಆ ರಿಯಲೈಸೇಷನ್ ಈಗ ಬರುವದಿಲ್ಲ. ಆದ್ದರಿಂದ ಕಂಟ್ರಾಕ್ಟರ್ಸ್ ಕೇಳತಕ್ಕದ್ದನ್ನು ಸರ್ಕಾರ ಪರಿಶೀಲನೆಮಾಡಿ ನೋಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ —ನೀವು ಈ ಅಂದಾಜು ಪ್ರಕಾರ ಗೊತ್ತುಮಾಡಿರುವ ಹಾಗೆ ಆ ಕ್ವಾರಿಯಿಂದ ಸಾಕಾದಷ್ಟು ಪ್ರಮಾಣದಲ್ಲಿ ಕಲ್ಲುಗಳು ಸಿಗಲಿಲ್ಲವೆಂದ ಮೇಲೆ ಅವರು ಇಲಾಖೆಯಿಂದೇನಾದರೂ ಅನುಮತಿ ಪಡೆದು ಬೇರೆ ಕ್ವಾರಿಯಿಂದ ಅದನ್ನು ತಂದಿದ್ದಾರೆಯೇ?

ಶ್ರೀ ಎಚ್. ಎನ್. ನಂಜೇಗೌಡ.—ಆ ರೀತಿಯಾಗಿ ಅನುಮತಿ ಕೊಟ್ಟಿರುವದು ಕಂಡುಬರಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ —ಇದರಲ್ಲಿ ಸುಮಾರು ೫೦ ಲಕ್ಷ ರೂಪಾಯಿಗಳು ನಷ್ಟವಾಗುತ್ತಾ ಇರತಕ್ಕ ಪ್ರಸಂಗವಿದೆ. ಆದ್ದರಿಂದ ಕೆಲವು ಇಲಾಖೆಯ ಅಧಿಕಾರಿಗಳು ಗುತ್ತಿಗೆದಾರರಿಂದ ಈ ರೀತಿಯಾಗಿ ಹೆಚ್ಚಿಗೆ ಹಣ ಹೊಡೆಯಬೇಕೆಂದು ಇದನ್ನು ಮತ್ತೆ ಸರ್ಕಾರದ ಮುಂದೆ ಇಟ್ಟಿದ್ದಾರೆಂದು ನಾನು ಭಾವಿಸುತ್ತೇನೆ. ಅದಕ್ಕಾಗಿ ಇದನ್ನು ತಾವು ವಿಚಾರ ಮಾಡುತ್ತಿರಾ?

ಶ್ರೀ ಎಚ್. ಎನ್. ನಂಜೇಗೌಡ.—ಅದು ಸದಸ್ಯರ ಅಭಿಪ್ರಾಯ.

RURAL COMMUNICATION ROADS IN MADHUGIRI TALUK

265 Sri. R. CHIKKAIAH (MADHUGIRI).– Will the Minister for Public Works and Electricity be pleased to state.—

(a) the number of Roads taken up by Public Works Department in Madhugiri Taluk under Rural Communication and the stage at which the work of these roads is pending;

(b) when these roads will be completed ;